Sri ANGADI CHANNABASAPPA.—I feel it is a policy matter.

Mr. SPEAKER.—An amendment will have to be brought from the Centre.

Sri ANGADI CHANNABASAPPA.—It is not an administrative matter but a policy matter-declaration of the Chief Minister whether he agrees with border adjustments or taking a village here, etc.

Sri S. NIJALINGAPPA.—The decision was taken long back. It was discussed in this House

Sri ANGADI CHANNABASAPPA.—What is the policy as it stands now ?

(No answer)

Sri ANNA RAO GANAMUKHI.—If the Centre suggests any arbitration, may we take it that the Chief Minister and the Mysore Government will never agree to it ?

Sri S. NIJALINGAPPA.—It is too hypothetical.

Mr. SPEAKER.—I am not allowing any supplementaries. The matter is premature. Question Next.

Extent of area to be submerged in Harinalla Irrigation Scheme and the extent of land to be benefited.

*Q—654. **Sri VALI CHANNAPPA** (Sampagaon-1).—

Will the Government be pleased to state :—

(*a*) the area to be submerged in the Harinalla (Tigadi) Irrigation Scheme and the extent of land to be benefited thereby ;

(*b*) the arrangements that have been made to rehabilitate those people;

(*c*) whether perennial irrigation can be had from this Scheme and if so, the extent of income expected by Government ?

A.—**Sri S. NIJALINGAPPA** (Chief Minister).—

	acres
(*a*) Area to be submerged ...	1,383
Extent of land to be benefited	10,750

(*b*) A new model colony for rehabilitating the expropriated people is proposed near navalgatti Village for which a provision of Rs. 99,800 is provided in the sanctioned estimate,

(*c*) Yes. The total annual revenue expected is Rs. 94,800.

ಶ್ರೀ ವಾಲಿ ಚನ್ನಪ್ಪ ಶಂಕರಪ್ಪ.—ಹರಿನಾಲ ನೀರಾವರಿ ಯೋಜನೆಯ ಬಗ್ಗೆ ಯಾವ ಯಾವ ಕ್ರಮ ವನ್ನು ತೆಗೆದುಕೊಂಡಿದ್ದೀರಿ ?

ಶ್ರೀ ಎಸ್. ನಿಜಲಿಂಗಪ್ಪ.—ಆ ಯೋಜನೆಯನ್ನು ಕಾರ್ಯಗತ ಮಾಡಲು ಏನೇನು ಕಾರ್ಯಕ್ರಮ ಗಳನ್ನು ತೆಗೆದುಕೊಳ್ಳಬೇಕೋ ಅದೆಲ್ಲವನ್ನೂ ತೆಗೆದು ಕೊಂಡಿದ್ದೇವೆ. ಮಾನ್ಯ ಸದಸ್ಯರೂ ಸಹ 4–5 ಸಾರಿ ನನ್ನ ಹತ್ತಿರ ಬಂದು ಈ ವಿಷಯವನ್ನು ಹೇಳಿದ್ದಾರೆ. ಮತ್ತು ಅವರ ಜೊತೆಯಲ್ಲಿ ಅನೇಕ ಜನಗಳನ್ನು ಸಹ ಕರೆದುಕೊಂಡು ಬಂದು ಆ ವಿಷಯವನ್ನು ಒತ್ತಾಯ ಪೂರ್ವಕವಾಗಿ ಹೇಳಿದ್ದಾರೆ. ಅಲ್ಲಿಗೆ ಇಂಜಿನಿಯರ್ಸ್ ಕಳುಹಿಸಿ ಅದನ್ನು ಪರೀಕ್ಷೆ ಮಾಡಿ ಅದರ ಎಸ್ಟಿಮೇಟನ್ನು ತಯಾರು ಮಾಡುವುದಕ್ಕೆ ಏರ್ಪಾಡು ಮಾಡಿದ್ದೇವೆ.

ಶ್ರೀ ವಾಲಿ ಚನ್ನಪ್ಪ ಶಂಕರಪ್ಪ.—ಅದಕ್ಕೆ ಎಷ್ಟು ದುಡ್ಡು ಖರ್ಚಾಗುತ್ತದೆ ?

ಶ್ರೀ ಎಸ್. ನಿಜಲಿಂಗಪ್ಪ.—ಅದಕ್ಕೆ 83.41 ಲಕ್ಷ ರೂಪಾಯಿಗಳು ಖರ್ಚಾಗುತ್ತವೆ.

ಶ್ರೀ ವಾಲಿ ಚನ್ನಪ್ಪ ಶಂಕರಪ್ಪ.—ಆ ಯೋಜನೆ ಯಿಂದ ಮುಳುಗಡೆಯಾಗುವ ಪ್ರದೇಶದ ಜನರ ನೆಲುವಾಗಿ ಏನು ವ್ಯವಸ್ಥೆಯನ್ನು ಮಾಡಿದ್ದೀರಿ ?

ಶ್ರೀ ಎಸ್. ನಿಜಲಿಂಗಪ್ಪ.—ಅದಕ್ಕೋಸ್ಕರ ನವಲ ಗಟ್ಟಿ ಗ್ರಾಮದ ಬಳಿ ಒಂದು ಹೊಸ ಮಾದರಿಯ ಕಾಲೋನಿಯನ್ನು ಎರ್ಪಡಿಸಲು ಉದ್ದೇಶಿಸಲಾಗಿದೆ. ಅಲ್ಲಿಗೆ ರಸ್ತೆಗಳನ್ನು ಮಾಡಿಸಬೇಕು, ಸ್ಕೂಲನ್ನು ಕೊಡಬೇಕು. ಅವರಿಗೆ ಏನೇನು ಅನುಕೂಲತೆಗಳು ಬೇಕೋ ಅವುಗಳನ್ನೆಲ್ಲಾ ಕಲ್ಪಿಸ ಬೇಕು ಎಂದು ಏರ್ಪಾಡು ಮಾಡಲಾಗಿದೆ.

ಶ್ರೀ ವಾಲಿ ಚನ್ನಪ್ಪ ಶಂಕರಪ್ಪ.—ಈ ನೀರಾವರಿ ಯೋಜನೆಯಿಂದ ಎಷ್ಟು ಸಾವಿರ ಎಕರೆ ಮುಳುಗಡೆ ಯಾಗುತ್ತದೆ ? ಎಷ್ಟು ಸಾವಿರ ಎಕರೆ ನೀರಾವರಿ ಯಾಗುತ್ತದೆ ?

Mr. SPEAKER.—I do not allow that question. The information is printed there.

ಶ್ರೀ ವಾಲಿ ಚನ್ನಪ್ಪ ಶಂಕರಪ್ಪ.—ಖಾಯಂ ನೀರಾ ವರಿ ಪೈಕಿಯಿಂದ ಎಷ್ಟು ಎಕರೆ ಆಗುತ್ತದೆ?

ಶ್ರೀ ಎಸ್. ನಿಜಲಿಂಗಪ್ಪ.—ಖಾಯಂ ನೀರಾವರಿ ಆಗತಕ್ಕದ್ದು 400 ಎಕರೆ ಎಂದಿದೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಈ ನೀರಾವರಿ ಯೋಜನೆಯಿಂದ ಎಷ್ಟು ಮನೆಗಳು ಮುಳುಗಡೆ ಯಾಗುತ್ತವೆ. ಆ ಮನೆಗಳವರಿಗೆ ಎಷ್ಟು ಪರ್ಸೆಂಟ್ ಕಾಂಪೆನ್‌ಸೇಷನ್ ಕೊಡಬೇಕೆಂದು ಸರ್ಕಾರದವರು ತೀರ್ಮಾನ ಮಾಡಿದ್ದಾರೆ ?

ಶ್ರೀ ಎಸ್. ನಿಜಲಿಂಗಪ್ಪ.—ನವಲಗಟ್ಟಿ ಹತ್ತಿರ 137 ಮನೆಗಳು ಮುಳುಗಡೆಯಾಗುತ್ತವೆ. ಮತ್ತು ಕುಲಾರಕೊಪ್ಪೆಯ ಹತ್ತಿರ 89 ಮನೆಗಳು ಮುಳುಗಡೆ ಯಾಗುತ್ತವೆ.

ಶ್ರೀ ಎಸ್. ಎಂ. ಕೃಷ್ಣ.—ಈ ಹರಿನಾಲ ನೀರಾ ವರಿ ಯೋಜನೆ ಪ್ಲಾನಿನಲ್ಲಿ ಸೇರಿದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಹೌದು ಸೇರಿದೆ.